ಆದರೆ, ಕಥೆಯನ್ನೇ ಅಲ್ಲವೇ ಪ್ರೇಕ್ಷಕರಿಗೆ ಉಣಬಡಿಸುವುದು? ಅದಕ್ಕೆ ಎಷ್ಟು ಅವಧಿ ತೆಗೆದುಕೊಳ್ಳುತ್ತಾರೆ ಎನ್ನುವುದು ಮುಖ್ಯವಲ್ಲ, ಎಷ್ಟು ಶಕ್ತವಾಗಿ ಹೇಳಬೇಕಾದುದನ್ನು ದಾಟಿಸುತ್ತಾರೆ ಎನ್ನುವುದು ಮುಖ್ಯ. 'ಮಧುಮತಿ' ಹಿಂದಿ ಸಿನಿಮಾದಲ್ಲಿ ಹೊರಾಂಗಣ ಹಾಗೂ ಒಳಾಂಗಣದ ದೃಶ್ಯಗಳನ್ನು ತಂತ್ರಜ್ಞಾನದ ನೆರವಿನಿಂದ ಬೆಸೆದು ಆ ಕಾಲದಲ್ಲೇ ಸಮರ್ಥವಾಗಿ ತೋರಿಸಿದ್ದರು.

◆ **ನೀವು ಹಲವು ತಲೆಮಾರಿನ ನಟರನ್ನು ನೋಡಿದ್ದೀರಿ. ಯಾರು ನಿಮಗೆ ಅಚ್ಚುಮೆಚ್ಚು? ಯಾಕೆ?**

ರಾಜ್‌ಕುಮಾರ್ ಯಾವತ್ತೂ ನನಗೆ ಅಚ್ಚುಮೆಚ್ಚು. ಹಾಗೆಯೇ ಎನ್.ಟಿ. ರಾಮರಾವ್ ಕೂಡ ಇಷ್ಟ. ಇಬ್ಬರೂ ಶಿಸ್ತಿಗೆ ಹೆಸರುವಾಸಿ.

ಒಂದು ಘಟನೆ ಹೇಳುತ್ತೇನೆ; 'ಗಂಧದ ಗುಡಿ' ಚಿತ್ರದ ಕಾಲದ್ದು. ನಾವೆಲ್ಲ ಚಿತ್ರೀಕರಣ ನಡೆಯುತ್ತಿದ್ದ ಜಾಗಕ್ಕೆ ಹೊಂದಿಕೊಂಡಂತೆ ಇದ್ದ ಸಣ್ಣ ಗುಡಿಸಲು ಹೋಟೆಲ್‌ನಲ್ಲಿ ದೋಸೆಯ ರುಚಿ ಕಂಡುಕೊಂಡಿದ್ದೆವು. ಬೆಳಗ್ಗೆ ಬೇಗ ಹೊರಟು, ಅಲ್ಲಿ ದೋಸೆ ಸವಿದು ಸೆಟ್‌ಗೆ ಬಂದು, ಲೈಟಿಂಗ್ ಮಾಡುತ್ತಾ ಇರುತ್ತಿದ್ದೆವು. ನಾವೆಲ್ಲ ಅಷ್ಟು ಬೇಗ ಬರುವುದನ್ನು ನೋಡಿ ರಾಜ್‌ಕುಮಾರ್ ಅವರಿಗೆ ಅನುಮಾನ ಬಂತು. ಅವರು ಎಲ್ಲರೂ ಅಷ್ಟು ಬೇಗ ಬರುತ್ತಿರುವುದು ಯಾಕೆ ಎಂದು ಕೇಳಿದರು. ಮೇಕಪ್ ಹಾಕಿಕೊಂಡ ನಂತರ ಶಾಟ್‌ಗೆ ಬರುವಂತೆ ಕರೆದರೂ, ಅದೇನು ಗುಟ್ಟು ಎಂದು ಹೇಳಿದರೆ ಮಾತ್ರ ಬರುವುದಾಗಿ ತಮಾಷೆ ಮಾಡಿದರು. ರಾಜಾರಾಂ ಅವರು ಶಾಟ್ ಮುಗಿದ ಮೇಲೆ ಹೇಳುವುದಾಗಿ ಒಪ್ಪಿಸಿ, ಕರೆದುಕೊಂಡು ಹೋದರು. ಆ ದಿನದ ಚಿತ್ರೀಕರಣವೆಲ್ಲ ಮುಗಿದ ಮೇಲೆ ದೋಸೆಯ ವಿಷಯ ತಿಳಿಸಿದರು. ಮರುದಿನ ನಾವು ಲೊಕೇಷನ್‌ಗೆ ಬರುವ ಹೊತ್ತಿಗಾಗಲೇ ರಾಜ್‌ಕುಮಾರ್ ಅವರೂ ಬಂದಿದ್ದರು. ದೋಸೆ ತಿನ್ನಲು ಹೋಗೋಣವೇ ಎಂಬ ಪ್ರಶ್ನೆಯು ಅವರ ಸರಳತೆಯ ನೋಟದಲ್ಲಿ ಇತ್ತು. ಅವರೆಲ್ಲ ಹಾಗೆ ಭೂಮಿ ತೂಕದವರಾಗಿದ್ದರು.

ಎನ್‌ಟಿಆರ್ ಅವರೂ ಬೆಳಗ್ಗೆ 9 ಗಂಟೆಯ ಹೊತ್ತಿಗೆಲ್ಲ ಮೇಕಪ್ ಹಾಕಿಕೊಂಡು ಚಿತ್ರೀಕರಣಕ್ಕೆ ಸಿದ್ಧರಾಗಿರುತ್ತಿದ್ದರು. ಎಂಜಿಆರ್ ಅವರಿಗೆ ಒಂದು ವೃತ್ತಿಪರ ನಿಲುವು ಇತ್ತು. ಅವರು ಆ ದಿನ ಚಿತ್ರೀಕರಣವಾದ ಭಾಗಗಳನ್ನೆಲ್ಲ ಸಂಕಲನ ಮಾಡಿಸಿ, ಮರುದಿನ ಬೆಳಿಗ್ಗೆ ನೋಡುತ್ತಿದ್ದರು. ನಾವು ಮಾಡಿದ ಕೆಲಸ ಇಷ್ಟವಾದರೆ ಮೆಲ್ಲಗೆ ಜೇಬಿನೊಳಕ್ಕೆ ಭಕ್ಷೀಸು ಇಡುತ್ತಿದ್ದರು. ಚಿತ್ರೀಕರಣವಾದ ಭಾಗಗಳೆಲ್ಲ ಚೆನ್ನಾಗಿ ಬಂದಿದೆಯೋ ಇಲ್ಲವೋ ಎಂದು ಅರಿಯಲು ಅವರು ಹಾಕಿಕೊಂಡಿದ್ದ ಶಿಸ್ತು ಅದು. ಅವರ ಎಷ್ಟೋ ಸಿನಿಮಾಗಳಲ್ಲಿ ಸಂಭಾವನೆಗಿಂತ ಹೆಚ್ಚು ಭಕ್ಷೀಸು ನನಗೆ ಸಿಕ್ಕಿದೆ.



ವಿ.ಕೆ. ಮೂರ್ತಿ ಅವರೊಂದಿಗೆ ಬಸವರಾಜು

◆ **ಹೊಸಕಾಲದ ಸಿನಿಮಟೊಗ್ರಫರ್‌ಗಳಲ್ಲಿ ನಿಮಗೆ ಯಾರೆಲ್ಲ ಇಷ್ಟ?**

ಸತ್ಯ ಹೆಗಡೆ, ಶೇಖರ್ ಚಂದ್ರ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ವಿಷ್ಣುವರ್ಧನ ಎಂಬ ಹುಡುಗ ನನ್ನ ಜೊತೆಯೂ ಕೆಲಸ ಮಾಡಿದ್ದ. ಅವನು ತೀರಿಕೊಂಡ. ಅವನೂ ಪ್ರತಿಭಾವಂತನಾಗಿದ್ದ.

◆ **ನೀವು ಯಾವೆಲ್ಲ ಕಿರುಚಿತ್ರಗಳನ್ನು ಮಾಡಿರುವಿರಿ?**

ವಿ.ಕೆ. ಮೂರ್ತಿ, ರಾಜಾರಾಂ ಅವರ ಬಗ್ಗೆ ಕಿರುಚಿತ್ರಗಳನ್ನು ಮಾಡಿರುವೆ. ಶ್ರವಣಬೆಳಗೊಳದ ಕುರಿತೂ ಸಾಕ್ಷ್ಯಚಿತ್ರವೊಂದನ್ನು ಚಿತ್ರೀಕರಿಸಿದ್ದೇನೆ. ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಮುಖ ಕಿರುಚಿತ್ರ ಮಾಡಿಕೊಟ್ಟಿದ್ದೇನೆ. ನಾನು ಕೈಹಾಕಿದ ಸಿನಿಮಾಗಳೆಲ್ಲ ಪೂರ್ಣಗೊಂಡು, ತೆರೆ ಕಂಡಿವೆ. ಇದು ನನ್ನ ಸುಕೃತ ಎಂದೇ ನಂಬಿದ್ದೇನೆ.

●